**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 2049/2025**

**ಫಿರ್ಯಾದುದಾರರು** ಸೆಂಟ್ ಮಿಲ್ಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ,
ಕಾರವಾರ, ಮುರ್ಡೇಶ್ವರ ಶಾಖೆ, ಪ್ರತಿನಿಧಿಸುವವರು,
ಇದರ ಸೀನಿಯರ್ ಆಸಿಸ್ಟೆಂಟ್,
ಶ್ರೀ ಕೃಷ್ಣ ಮಂಜುನಾಥ ನಾಯ್ಕ,

**– ವಿರುದ್ಧ –**

**ಆರೋಪಿತರು** ಶ್ರೀ ಕೇಶವ ಮಂಜುನಾಥ ನಾಯ್ಕ,
ವಯಸ್ಸುಃ 36 ವರ್ಷ
ಸಾಃ ಗುಂಡ್ಲೊಕಟ್ಟ , ಗೋಲಿಕುಂಬ್ರಿ,
ಕೊಪ್ಪ, ಭಟ್ಕಳ ತಾಲೂಕು–581350.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 07–12–2021 ರಂದು ಪಿರ್ಯಾದಿ ಸೊಸೈಟಿಯಲ್ಲಿ ರೂ.1,20,000/– (ರೂಪಾಯಿ ಒಂದು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಹಣವನ್ನು ಸಾಲದ ಖಾತೆ ಸಂಖ್ಯೆಃ BL No.13 ರಲ್ಲಿ ವ್ಯವಹಾರ ಸಾಲವಾಗಿ ಪಡೆದುಕೊಂಡಿದ್ದು, ಸದ್ರಿ ಸಾಲದ ಹಣವನ್ನು ವಾರ್ಷಿಕ ಶೇಕಡಾ 15% ವಾರ್ಷಿಕ ಬಡ್ಡಿ ಮತ್ತು 3.75% ದಂಡದ ಬಡ್ಡಿ ದರದಂತೆ ಮರುಪಾವತಿಸುವುದಾಗಿ ಭರವಸೆ ನೀಡಿರುತ್ತೀರಿ. ಸಾಲ ತೆಗೆದುಕೊಂಡು ನಂತರ ದಿನಾಂಕಃ07/12/2021 ಸ್ವಲ್ಪ ಹಣವನ್ನು ಮರುಪಾವತಿ ಮಾಡಿರುತ್ತೀರಿ. ದಿನಾಂಕಃ 30–05–2025 ರ ತನಕ ಒಟ್ಟು ರೂ. 84,995/–(ರೂಪಾಯಿ ಎಂಭತ್ತಾಲ್ಕು ಸಾವಿರದ ಒಂಭೈನೂರ ತೊಂಭತ್ತೈದು ಮಾತ್ರ) ಬಾಕಿ ಇರುತ್ತದೆ. ನಂತರ ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಬ್ಯಾಂಕ್ ಆಫ್ ಬರೋಡ , ಮುರ್ಡೇಶ್ವರ ಶಾಖೆಯ ಚೆಕ್ ನಂಬರ್ 000009 ನ್ನು ರೂ. 84,995/–(ರೂಪಾಯಿ ಎಂಭತ್ತಾಲ್ಕು ಸಾವಿರದ ಒಂಭೈನೂರ ತೊಂಭತ್ತೈದು ಮಾತ್ರ)ಕ್ಕೆ ದಿನಾಂಕಃ 30–05–2025 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ದಿ.ಫೆಡರಲ್ ಬ್ಯಾಂಕ್, ಭಟ್ಕಳ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರಪಡಿಸಿದಾಗ,“Account Blocked situation covered in 2125"ಎಂಬ ಹಿಂಬರಹದೊಂದಿಗೆ ದಿನಾಂಕಃ 31–05–2025 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 12-06-2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 26-06-2025 ರಂದು Unclaimed ಎಂದು ವಾಪಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 29-10-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.